## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 45/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀಮತಿ ವಿಜಯ.ಜಿ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಮುತ್ತಪ್ಪ | | 05.10.2023 |
| ವಯಸ್ಸು | ಃ 47 ವರ್ಷ | | |
| ವೃತ್ತಿ | ಃ ಶಿಕ್ಷಕಿ | | ಪ್ರಾ.ಸಾ. ಃ 05 |
| ವಾಸಸ್ಥಳ | ಃ ಮೈಸೂರು | | ಚಾ.ಸಾ. ಃ 07 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಪಿ.ಯು.ಸಿ ವರೆಗೆ ಓದಿದ್ದೇನೆ. *8* ನೇ ತರಗತಿಯಿಂದ ಪಿ.ಯು.ಸಿ ವರಗೆ ನಾನು ಸಂಸ್ಕೃತ ಭಾಷೆಯನ್ನು ಪ್ರಥಮ ಭಾಷೆಯಾಗಿ ಅಭ್ಯಾಸ ಮಾಡಿದ್ದರಿಂದ *1995* ರಿಂದ ಟಿ.ನರಸೀಪುರದ ವಿಶ್ವಚೇತನ ಸಂಸ್ಕೃತ ಪಾಠಶಾಲೆಯಲ್ಲಿ ಕೆಲಸ ಮಾಡುತ್ತಿದ್ದೆ. *1999* ರಿಂದ ನನ್ನನ್ನು ವಿಶ್ವಚೇತನ ಸಂಸ್ಕೃತ ಪಾಠಶಾಲೆ ಮೈಸೂರಿಗೆ ವರ್ಗಾಯಿಸಿದ್ದು ಆಗಿನಿಂದ ಅಲ್ಲಿಯೇ ಕೆಲಸ ಮಾಡುತ್ತಿದ್ದೇನೆ. ನಾನು ಕೆಲಸಕ್ಕೆ ಸೇರಿದಾಗ *30,000/-* ಹಣವನ್ನು ಲಂಚವಾಗಿ ಕೊಡಬೇಕೆಂದು ಸಂಸ್ಥೆಯವರು ಹೇಳಿದ್ದರು ಆ ಕಾಲಕ್ಕೆ ನನ್ನ ಬಳಿ ಹಣವಿರಲಿಲ್ಲವಾದ್ದರಿಂದ ಪ್ರತಿ ತಿಂಗಳು ನನ್ನ ಸಂಬಳದಲ್ಲಿ ಆ ಹಣವನ್ನು ಕಡಿತಗೊಳಿಸುವಂತೆ ಸಂಸ್ಥೆಯ ಕಾರ್ಯದರ್ಶಿ ಪರಶಿವಮೂರ್ತಿಯವರಿಗೆ ಹೇಳಿದ್ದೆ. ಆ ಕಾರಣಕ್ಕೆ ಅವರು ನನ್ನ ಸಂಬಳದಲ್ಲಿ *1,000/-* ಹಣವನ್ನು ನನಗೆ ಕೊಟ್ಟು ಉಳಿದ *2,500/-* ಹಣವನ್ನು ಅವರು ಕಡಿತಗೊಳಿಸುತ್ತಿದ್ದರು. ನಾನು ಕೆಲಸಕ್ಕೆ ಸೇರಿಕೊಂಡಾಗಲೇ ಶಶಿಕಲಾ ಎನ್ನುವವರು ಸಹ ಕೆಲಸಕ್ಕೆ ಸೇರಿದ್ದರು. ನಮ್ಮ ಶಾಲೆಯ ಕೆಲಸದ ಅವಧಿ ಬೆ.*7* ರಿಂದ *9.30* ಮತ್ತು ಸಂಜೆ *5* ರಿಂದ *7* ಗಂಟೆ ಆಗಿತ್ತು.

*2.* ನಂತರ ಶಿಕ್ಷಕರು ಮತ್ತು ಸಂಸ್ದೆಯ ಕಾರ್ಯದರ್ಶಿ ನಡುವೆ ಮನಸ್ತಾಪ ಬಂದಿದ್ದರಿಂದ ಆ ಶಾಲೆಯ ಮಾನ್ಯತೆ ರದ್ದಾಗಿತ್ತು. ನಂತರ *2015* ರಲ್ಲಿ *4* ನೇ ಆರೋಪಿತರಾದ ಶಾಲೆಯ ಮುಖ್ಯ ಶಿಕ್ಷಕರಾದ ವಿಶ್ವನಾಥ ಇವರು ಶಾಲೆಯನ್ನು ಪುನಃ ಪ್ರಾರಂಭಿಸಿತ್ತಿದ್ದೇವೆ ಕೆಲಸಕ್ಕೆ ಬನ್ನಿ ಎಂದು ಹೇಳಿದ್ದರು. ಆಗ ನಾನು ಪುನಃ ಕೆಲಸಕ್ಕೆ ಸೇರಿದ್ದೆ. *2017* ರಲ್ಲಿ ಬಾಕಿ ವೇತನದ ಹಣ ಅಂದಾಜು *5* ಲಕ್ಷ ವರೆಗೆ ಬಂದಿತ್ತು. ಆ ಪೂರ್ತಿ ಹಣವನ್ನು ಕಾರ್ಯದರ್ಶಿಗೆ ಕೊಡಬೇಕೆಂದು ವಿಶ್ವನಾಥ ಇವರು ಹೇಳಿದ್ದರು ಆಗ ನಾನು ವಿಶ್ವನಾಥ ಇವರಿಗೆ ಆ ಪೂರ್ತಿ ಹಣವನ್ನು ಕೊಟ್ಟಿದ್ದೆ. ನಮ್ಮ ಶಾಲೆಯ ಸಭೆಗಳು ನೀಲಕಂಠ ಸ್ವಾಮಿ ಮಠದಲ್ಲಿ ನಡೆಯುತ್ತಿದ್ದವು. ಆ ಸಭೆಗಳಲ್ಲಿ ಸಂಸ್ದೆಯ ಅಧ್ಯಕ್ಷರಾದ ನಾಗರಾಜು, ಕಾರ್ಯದರ್ಶಿ ಪರಶಿವಮೂರ್ತಿ ಹಾಗೂ ಟಿ.ನರಸೀಪುರ ಮತ್ತು ಎನ್.ಆರ್.ಮೊಹಲ್ಲಾ ಶಾಲೆಗಳು ಶಿಕ್ಷಕರು ಭಾಗವಹಿಸುತ್ತಿದ್ದವು.

*3.* *2017* ರಿಂದ ನನಗೆ ತಿಂಗಳಿಗೆ *40,000/-* ರೂಪಾಯಿ ಸಂಬಳ ಬರುತ್ತಿತ್ತು ಆ ಸಂಬಳದ ಹಣದಲ್ಲಿ ಪರಶಿವಮೂರ್ತಿಯವರು ಪ್ರತಿ ತಿಂಗಳು *15,000/-* ಪಡೆದುಕೊಳ್ಳುತಿದ್ದರು. ಎಲ್ಲಾ ಶಿಕ್ಷಕರಿಂದಲೂ ಆ ರೀತಿ ಹಣ ಪಡೆದುಕೊಳ್ಳುತ್ತಿದ್ದರು. ಬಾಲಚಂದ್ರ ಹೆಗ್ಡೆ ಎನ್ನುವ ಶಿಕ್ಷಕರು ಪರಶಿವಮೂರ್ತಿಯವರಿಗೆ ಹಣ ಕೊಡುತ್ತಿರಲಿಲ್ಲ. ಆದ ಕಾರಣ ಅವರನ್ನು ಟಿ.ನರಸೀಪುರ ಶಾಲೆಗೆ ಡೆಪ್ಯೂಟೇಷನ್ ಮೇಲೆ ವರ್ಗಾಯಿಸಿದ್ದರು. ಬಾಲಚಂದ್ರ ಹೆಗ್ಡೆ ಅವರ ಜಾಗಕ್ಕೆ ಬಸವಲಿಂಗಸ್ವಾಮಿ ಇವರನ್ನು ವರ್ಗಾವಣೆ ಮಾಡಿದ್ದರು. ಶಿಕ್ಷಕರು ಹಣವನ್ನು ಕೊಡದೇ ಇದ್ದರೇ ಪರಶಿವಮೂರ್ತಿಯವರು ಹಣ ಕೊಡದೇ ಇದ್ದ ಶಿಕ್ಷಕರಿಗೆ ಬೈಯುತ್ತಿದ್ದರು. ನಮಗೆ ಸರಿಯಾಗಿ ಇಂಕ್ರಿಮೆಂಟ್ ಗಳನ್ನು ಕೊಡುತ್ತಿರಲಿಲ್ಲ. ತಿಂಗಳಿಗೆ ಒಂದು ಬಾರಿ ಆ ರೀತಿ ಸಭೆ ನಡೆಯುತ್ತಿತ್ತು. ಆ ರೀತಿ ಸಭೆ ನಡೆದಾಗ ಶಾಲೆಗೆ ಸಂಬಂದಪಟ್ಟಂತೆ ಚರ್ಚೆ

ನಡೆಯುತ್ತಿತ್ತು ಮತ್ತು ಪರಶಿವಮೂರ್ತಿಯವರು ಶಿಕ್ಷಕರ ಮೇಲೆ ಕೂಗಾಡುತ್ತಿದ್ದರು. ಆ ರೀತಿ ಕಿರುಚಾಡಿದ ನಂತರ ಸಭೆ ಮುಗಿದ ಬಳಿಕ ವಿಶ್ವನಾಥ ಇವರು ಯಾವಾಗಲೂ ಹೀಗೆ ಕಿರುಚಾಡುತ್ತಾನೆ ಇವನನ್ನು ಹೀಗೆ ಬಿಟ್ಟರೇ ಆಗುವುದಿಲ್ಲ ಎಂದು ಹೇಳುತ್ತಿದ್ದರು.

*4.* ಒಂದು ಬಾರಿ ಪರಶಿವಮೂರ್ತಿಯವರು ವಿಶ್ವನಾಥ ಇವರಿಗೆ ಸಂಸ್ಥೆಯ ಕಟ್ಟಡ ಕಟ್ಟಬೇಕು ಜಾಗ ತೆಗೆದುಕೊಳ್ಳಬೇಕು ಶಿಕ್ಷಕರಿಂದ ಹಣ ಕಲೆಕ್ಟ್ ಮಾಡಿ ಕೊಡಿ ಎಂದು ಕೇಳಿದ್ದರು. ಆ ಕಾರಣಕ್ಕೂ ಸಹ ವಿಶ್ವನಾಥ ಇವರು ಕೋಪ ಮಾಡಿಕೊಂಡು ಇವರನ್ನು ಹೀಗೆ ಬಿಟ್ಟರೇ ಆಗುವುದಿಲ್ಲ ಇವನನ್ನು ಮುಗಿಸಬೇಕು ಎಂದು ಹೇಳುತ್ತಿದ್ದರು. ಆ ರೀತಿ ಹೇಳಿದಾಗ ಪರಶಿವಮೂರ್ತಿಯವರು ಹಾಜರಿರಲಿಲ್ಲ. *2020* ನೇ ಇಸವಿಯಲ್ಲಿ ಆ ರೀತಿ ಜಾಗ ತೆಗೆದುಕೊಳ್ಳಲು ಮತ್ತು ಕಟ್ಟಡ ಕಟ್ಟಲು ಹಣ ಕಲೆಕ್ಟ್ ಮಾಡಿಕೊಡುವಂತೆ ಪರಶಿವಮೂರ್ತಿಯವರು ವಿಶ್ವನಾಥ ಇವರಿಗೆ ಹೇಳಿದ್ದರು ಆದರೆ ಯಾವ ತಿಂಗಳಿನಲ್ಲಿ ಆ ರೀತಿ ಹೇಳಿದ್ದರೆಂದು ನೆನಪಿಲ್ಲ. ಸೆಪ್ಟೆಂಬರ್ *21, 2020* ರಂದು ಪತ್ರಿಕೆಗಳಲ್ಲಿ ನೋಡಿದಾಗ ಪರಶಿವಮೂರ್ತಿಯವರ ಕೊಲೆಯಾಗಿದೆ ಎಂದು ಗೊತ್ತಾಗಿತ್ತು. ಅವರ ಕೊಲೆಯಾಗುವ *6–7* ತಿಂಗಳಿನ ಹಿಂದೆ ನಡೆದ ಸಭೆಯಲ್ಲಿ ಪರಶಿವಮೂರ್ತಿಯವರು ಕಟ್ಟಡಕ್ಕೆ ಹಣ ಹೊಂದಿಸಿಕೊಡುವಂತೆ ವಿಶ್ವನಾಥ ಇವರಿಗೆ ಕೇಳಿದ್ದರು. ಟಿ.ವಿ ನ್ಯೂಸ್ ನಲ್ಲಿ ನೋಡಿದಾಗ ಸಿದ್ದರಾಜು, ವಿಶ್ವನಾಥ, ಪರಶಿವ, ನಿರಂಜನ ಮತ್ತು ನಾಗೇಶ ಎನ್ನುವವರು ಪರಶಿವಮೂರ್ತಿಯವರನ್ನು ಕೊಲೆ ಮಾಡಿದ್ದಾರೆ ಎಂದು ನನಗೆ ಗೊತ್ತಾಗಿತ್ತು. ಆದರೆ ಯಾವ ಕಾರಣಕ್ಕೆ ಕೊಲೆ ಮಾಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ತನಿಖಾಧಿಕಾರಿಗಳ ಮುಂದೆ ನಾನು ನನ್ನ ಹೇಳಿಕೆಯನ್ನು ಕೊಟ್ಟಿದ್ದೇನೆ. ಮೂಗೂರಿನಲ್ಲಿ ವಿಶ್ವಚೇತನ ಸಂಸ್ಥೆಯ ಕಾನ್ವೆಂಟ್ ಇತ್ತು.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*5.* ಜೂನ್ ಅಥವಾ ಜುಲೈ *2020* ರಲ್ಲಿ ನಡೆದ ಸಭೆ ಕಾಲಕ್ಕೆ ಪರಶಿವಮೂರ್ತಿಯವರ ವಿಶ್ವನಾಥ ಇವರಿಗೆ ನಮ್ಮ ಸಂಸ್ಥೆಗೆ ಸ್ವಂತ ಬಿಲ್ಡಿಂಗ್ ಇಲ್ಲ ಎಲ್ಲಾದರೂ ಜಾಗ ತೆಗೆದುಕೊಂಡು ಸ್ವಂತ ಬಿಲ್ಡಿಂಗ್ ಕಟ್ಟಲು ಹಣ ಬೇಕು ನೀವು ಕೊಡಿ ಎಂದು ಕೇಳಿದಾಗ ವಿಶ್ವನಾಥ ಇವರು ಪರಶಿವಮೂರ್ತಿಯವರಿಗೆ ನಿನ್ನ ಕಿರುಕುಳ ಜಾಸ್ತಿಯಾಯಿತು ಬೋಳಿಮಗನೇ ನಿನ್ನ ಮನೆಗೆ ಬಂದು ನಿನಗೆ ರಾಡಿನಲ್ಲಿ ಹೊಡೆದು ಕೊಲೆ ಮಾಡುತ್ತೇನೆ ನಿನ್ನನ್ನು ಉಳಿಸುವುದಿಲ್ಲ ಎಂದು ಕೂಗಾಡಿದ್ದರು ಎಂದರೆ ಸಭೆ ಮುಗಿದು ಪರಶಿವಮೂರ್ತಿ ಹೊರಗಡೆ ಹೋದ ನಂತರ ಆ ರೀತಿ ಕೂಗಾಡಿದ್ದರು. ತನಿಖಾಧಿಕಾರಿ ಮುಂದೆ ಪರಶಿವಮೂರ್ತಿಗೆ ______ ಅಂತ ಕೂಗಾಡಿದ್ದು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಸದರಿ ಭಾಗವನ್ನು ನಿ.ಪಿ-*44* ಎಂದು ಗುರುತಿಸಿದೆ.

ಪಾಟೀ ಸವಾಲು ಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-

*6.* ಪರಶಿವಮೂರ್ತಿಯವರ ಕೊಲೆಯಾದ ಬಳಿಕ *27.10.2020* ರಂದು ಅವರನ್ನು ಕೊಲೆ ಮಾಡಿದ್ದು ಯಾರು ಎನ್ನುವ ಬಗ್ಗೆ ಟಿ.ವಿಯಲ್ಲಿ ಸುದ್ದಿ ಪ್ರಕಟವಾಗಿತ್ತು. ಅಲ್ಲಿಯವರೆಗೆ ಅವರನ್ನು ಕೊಲೆ ಮಾಡಿದವರ ಬಗ್ಗೆ ನನಗೆ ಗೊತ್ತಾಗಿರಲಿಲ್ಲ. ಆ ದಿನಾಂಕದವರೆಗೆ ನನ್ನನ್ನು ಪೋ.ಠಾಣೆಗೆ ಕರೆಸಿರಲಿಲ್ಲ. ಆ ಸುದ್ದಿ ಪ್ರಕಟವಾದ ಅಂದಾಜು *1* ತಿಂಗಳ ಬಳಿಕ ನನಗೆ

ಫೋನ್ ಮಾಡಿ ಪೋ.ಠಾಣೆಗೆ ಬರುವಂತೆ ಹೇಳಿದ್ದರು. ಅದಕ್ಕೂ ಮೊದಲು ನಾನು ಪೋ.ಠಾಣೆಗೆ ಹೋಗಿರಲಿಲ್ಲ. ಪರಶಿವಮೂರ್ತಿಯವರ ಕೊಲೆಯಾದ ಬಳಿಕ ವಿದ್ಯಾಸಂಸ್ಥೆಯ ವಿಚಾರಗಳನ್ನು ಪೋಲೀಸರಿಗೆ ತಿಳಿಸುವ ಅವಶ್ಯಕತೆ ನನಗೆ ಕಂಡುಬಂದಿರಲಿಲ್ಲ. ಪರಶಿವಮೂರ್ತಿಯವರ ಕೊಲೆಯಾಗಿ *10* ದಿನಗಳ ಬಳಿಕ ನೀಲಕಂಠ ಸ್ವಾಮಿ ಮಠದಲ್ಲಿ ಶ್ರದ್ಧಾಂಜಲಿ ಸಭೆ ಮಾಡಿದ್ದೇವು. ಆ ಕಾಲಕ್ಕೆ ಸಂಸ್ಥೆಯ ಅಧ್ಯಕ್ಷರು, ಎಲ್ಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸೇರಿದ್ದೇವು. ಆ ಶ್ರದ್ಧಾಂಜಲಿ ಸಭೆ ಕಾಲಕ್ಕೆ ಪರಶಿವಮೂರ್ತಿಯವರು ಕೊಲೆ ಮಾಡಿದವರ ಕುರಿತು ಅನುಮಾನ ಇದ್ದ ಬಗ್ಗೆ ಪೋಲೀಸರಿಗೆ ತಿಳಿಸುವ ಕುರಿತು ಚರ್ಚೆ ನಡೆದಿರಲಿಲ್ಲ.

*7.* ಬಾಕಿ ವೇತನದ *4-5* ಲಕ್ಷ ರೂಪಾಯಿಗಳನ್ನು ವಿಶ್ವನಾಥ ಇವರಿಗೆ ಕೊಟ್ಟ ಬಗ್ಗೆ ತನಿಖಾಧಿಕಾರಿ ಮುಂದೆ ಹೇಳಿಲ್ಲ ಎಂದರೆ ಪರಶಿವಮೂರ್ತಿಯವರಿಗೆ ಕೊಟ್ಟ ಬಗ್ಗೆ ಹೇಳಿದ್ದೆ. ಪರಶಿವಮೂರ್ತಿಯವರು ಒಂದೊಂದು ಸಲ ಶಾಲೆಯ ಮೀಟಿಂಗ್ ಇದೆ ಎಲ್ಲಾ ಶಿಕ್ಷಕರು ನಮ್ಮ ಮನೆಗೆ ಬರುತ್ತಾರೆ ನೀವು ನಮ್ಮ ಮನೆಗೆ ಬನ್ನಿ ಎಂದು ಕರೆಯುತ್ತಿದ್ದರು ಎಂದು ಹೇಳಿಕೆ ಕೊಟ್ಟಿದ್ದೇನೆ. ಎರಡು ಶಾಲೆಗಳನ್ನು ಸೇರಿಸಿ ಒಟ್ಟು *7* ಜನ ಶಿಕ್ಷಕರು ಇದ್ದೆವು. ಪರಶಿವಮೂರ್ತಿಯವರು ಎಲ್ಲಾ ಶಿಕ್ಷಕರಿಂದಲೂ ಹಣ ಪಡೆಯುತ್ತಿದ್ದರು ವಿಶ್ವನಾಥ ಇವರಿಂದಲೂ ಅದೇ ರೀತಿ ಹಣ ಪಡೆದಿರಬಹುದು. ಕಟ್ಟಡ ಕಟ್ಟಲು ಎಷ್ಟು ಹಣ ಬೇಕು ಎನ್ನುವ ಬಗ್ಗೆ ಎಸ್ಟಿಮೇಷನ್ ಆಗಿತ್ತೊ ಇಲ್ಲವೊ ನನಗೆ ಗೊತ್ತಿಲ್ಲ. ವಿದ್ಯಾಸಂಸ್ಥೆಯ ಎಲ್ಲಾ ಜವಾಬ್ದಾರಿಯನು ಪರಶಿವಮೂರ್ತಿಯವರೇ ನಿರ್ವಹಿಸುತ್ತಿದ್ದರು ಎಂದರೆ ನಿಜ. ಪರಶಿವಮೂರ್ತಿಯವರು ರಿಯಲ್ ಎಸ್ಟೇಟ್, ಬಡ್ಡಿ ವ್ಯವಹಾರ ಮತ್ತು ಮುಂತಾದ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೈಸೂರಿನಲ್ಲಿ

ಪರಶಿವಮೂರ್ತಿಯವರಿಗೆ ಆಗದ ಬಹಳಷ್ಟು ಜನ ಇದ್ದರು ಎಂದರೆ ನನಗೆ ಗೊತ್ತಿಲ್ಲ ಅವರೆಲ್ಲರೂ ವಿದ್ಯಾಸಂಸ್ಥೆಯ ಬಳಿ ಬಂದು ಗಲಾಟೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

*8.* ನಾನು ವಿಶ್ವಚೇತನ ವಿದ್ಯಾಸಂಸ್ಥೆಗೆ ನಿರ್ದೇಶಕರಲ್ಲ ಮತ್ತು ನಿರ್ದೇಶಕರ ಸಭೆಗೆ ನಾನು ಹಾಜರಾಗುತ್ತಿರಲಿಲ್ಲ ಎಂದರೆ ನಿಜ. ಆ ಸಭೆಗಳಲ್ಲಿ ಏನೇನು ಮತ್ತು ಯಾರ ನಡುವೆ ಚರ್ಚೆ ಆಗುತ್ತಿತ್ತು ಮತ್ತು ಏನು ನಡಾವಳಿ ಆಗುತ್ತಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಪರಶಿವಮೂರ್ತಿಯವರ ಕೊಲೆ ಯಾರಿಂದ ಆಗಿದೆ ಎನ್ನುವ ಬಗ್ಗೆ ದೂರದರ್ಶನದವರಿಗೆ ಪೋಲೀಸ್ ನವರೇ ಮಾಹಿತಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಪರಶಿವಮೂರ್ತಿಯವರ ಸಾವು ಹೇಗೆ ಆಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಸಂಸ್ಥೆಯ ಅಧ್ಯಕ್ಷರಾದ ನಾಗರಾಜು ಇವರು ಈಗ ನನ್ನ ಸಂಪರ್ಕದಲ್ಲಿದ್ದಾರೆ ಎಂದರೆ ಶಾಲೆಯ ವಿಷಯಕ್ಕೆ ಅವಶ್ಯಕತೆ ಇದ್ದಾಗ ನನ್ನನ್ನು ಸಂಪರ್ಕ ಮಾಡುತ್ತಾರೆ. ನಾಗರಾಜು ಮತ್ತು ಪೋಲೀಸರ ಹೇಳಿಕೆಯಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***2 ನೇ ಆರೋಪಿ ಪರ ವಕೀಲರು ಗೈರು ಹಾಜರಿದ್ದು 2 ನೇ ಆರೋಪಿತ 1 ನೇ ಆರೋಪಿತನ ಪರ ವಕೀಲರ ಪಾಟೀ ಸವಾಲುನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.***

**ಪಾಟೀ ಸವಾಲುಃ *3* ಮತ್ತು *4* ನೇ ಆರೋಪಿತರ ಪರ ಶ್ರೀ ಸಿ.ಪಿ ವಕೀಲರಿಂದಃ**

*9.* ***1995*** ರಲ್ಲಿ ನಾನು ಕೆಲಸಕ್ಕೆ ಸೇರಿದಾಗ ವಿಶ್ವಚೇತನ ಪಾಠಶಾಲೆ ಅನುದಾನಿತ ಶಾಲೆಯಾಗಿತ್ತು. ಸಂಬಳದ ಹಣ ಸರ್ಕಾರದಿಂದ ನೇರವಾಗಿ ನನ್ನ ಖಾತೆಗೆ ಬರುತ್ತಿತ್ತು ಎಂದರೆ ನಿಜ. ಪ್ರಾರಂಭದಲ್ಲಿ ನನಗೆ ತಿಂಗಳಿಗೆ ***3,000/-*** ವೇತನ ಬರುತ್ತಿತ್ತು. ನೇರವಾಗಿ ನನ್ನ ಖಾತೆಗೆ ಜಮಾ

ಆಗುತ್ತಿದ್ದರಿಂದ ಸಂಸ್ಥೆಯವರು ಕಡಿತಗೊಳಿಸುವ ಸಾಧ್ಯತೆ ಇರಲಿಲ್ಲ ಎಂದರೆ ನಿಜ ಸಾಕ್ಷಿ ಸ್ವತಃ ಹೇಳುತ್ತಾರೆ ನಾನೇ *1,000/-* ಉಳಿಸಿಕೊಂಡು ಉಳಿದ ಹಣವನ್ನು ಸಂಸ್ಥೆಗೆ ಕೊಡುತ್ತಿದ್ದೆ. ಆ ರೀತಿ ಸಂಸ್ಥೆಗೆ ಹಣ ಕೊಡುತ್ತಿದ್ದೆ ಎಂದು ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ನಿಜ. ಪೋಲೀಸರ ಮುಂದೆ ಅವರು ಸುಮಾರು *3-4* ವರ್ಷ ನನ್ನ ಪ್ರತಿ ತಿಂಗಳ ಸಂಬಳದಲ್ಲಿ *1,000/-* ರೂಪಾಯಿಗಳನ್ನು ಹಿಡಿದುಕೊಳ್ಳುತಿದುದ್ದಲ್ಲದೇ *2,000/-* ರೂಗಳನ್ನು ಸಹ ಹಿಡಿದುಕೊಂಡು ಉಳಿದ ಸಂಬಳವನ್ನು ನನಗೆ ಕೊಡುತ್ತಿದ್ದರು ಎಂದು ಹೇಳಿಕೆ ಕೊಟ್ಟಿಲ್ಲ. ಸದರಿ ಹೇಳಿಕೆಯ ಸದರಿ ಭಾಗವನ್ನು ನಿ.ಡಿ-*1* ಎಂದು ಗುರುತಿಸಿದೆ.

*10.* *1995* ರಲ್ಲಿ ಪರಶಿವಮೂರ್ತಿಯವರು ತಿಂಗಳಿಗೆ ಒಂದು ಬಾರಿ ಶಾಲೆ ಬಳಿ ಬರುತ್ತಿದ್ದರು. ಆ ಕಾಲಕ್ಕೆ ಅವರು ಸರ್ಕಾರಿ ಕಾಲೇಜಿನಲ್ಲಿ ಲೆಕ್ಚರರ್ ಆಗಿ ಕೆಲಸ ಮಾಡುತ್ತಿದ್ದರು ಆದರೆ ಯಾವ ಊರಿನಲ್ಲಿ ಎಂದು ಗೊತ್ತಿಲ್ಲ. ನಾನು ವಿಶ್ವನಾಥ ಇವರ ಮುಖಾಂತರ ಅಥವಾ ವಿಶ್ವನಾಥ ಇವರಿಗೆ ಹಣ ಕೊಡುತ್ತಿದ್ದೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಬಾಕಿ ವೇತನದ ಹಣ ನನ್ನ ಖಾತೆಗೆ ಪಾವತಿ ಆಗಿತ್ತು. ತನಿಖಾಧಿಕಾರಿ ಮುಂದೆ ಎಲ್ಲರಿಗೆ ಸೇರಿ ಒಟ್ಟು ಸುಮಾರು *52* ಲಕ್ಷ ರೂಪಾಯಿ ಹಣ ಬಂದಿತ್ತು ಆ ಹಣವನ್ನು ನಮಗೆ ಯಾರಿಗೂ ನೀಡದೇ ಪರಶಿವಮೂರ್ತಿ ಮತ್ತು ವಿಶ್ವನಾಥರವರು ಇಟ್ಟುಕೊಂಡಿದ್ದರು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ. ಕಾರ್ಯದರ್ಶಿಯವರಿಗೆ ಕೊಡಬೇಕು ಎಂದು ವಿಶ್ವನಾಥ ಇವರು ನನ್ನಿಂದ ಬಾಕಿ ವೇತನದ ಹಣ ಪಡೆದುಕೊಂಡಿದ್ದರು ಎಂದು ತನಿಖಾಧಿಕಾರಿ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಒಟ್ಟು ಎಷ್ಟು ಸದಸ್ಯರಿದ್ದರು ಎಂದು ನನಗೆ ಗೊತ್ತಿಲ್ಲ. ಅಧ್ಯಕ್ಷರು ಮತ್ತು ಕಾರ್ಯದರ್ಶಿ ಹೆಸರು ಬಿಟ್ಟು ಬೇರೆಯವರ ಹೆಸರು ಗೊತ್ತಿಲ್ಲ.

*11.* ವಿಶ್ವನಾಥ ಇವರ ಕೈಗೆ ಹಣ ಕೊಟ್ಟ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ಪರಶಿವಮೂರ್ತಿಯವರು ಶಿಕ್ಷಕರನ್ನು ಉದ್ದೇಶಿಸಿ ಬೈದಾಡಿದಾಗ ನನಗೂ ಸಹ ಕೋಪ ಬರುತ್ತಿತ್ತು ಎಂದರೆ ನಿಜ. ಸಾಕ್ಷಿ ಪುನಃ ಹೇಳುತ್ತಾರೆ ಬೇಜಾರಾಗುತ್ತಿತ್ತು ಆದರೆ ಕೋಪ ಬರುತ್ತಿರಲಿಲ್ಲ. ವಿಶ್ವನಾಥ ಇವರು ಹಣ ಕೊಟ್ಟಿಲ್ಲ ಎನ್ನುವ ಕಾರಣಕ್ಕೆ ವೈಯಕ್ತಿಕವಾಗಿ ಅವರನ್ನು ಮಾತ್ರ ಪರಶಿವಮೂರ್ತಿಯವರು ಬೈದಿರಲಿಲ್ಲ. ಪ್ರತಿ ತಿಂಗಳು ಸಭೆ ಕಾಲಕ್ಕೆ ಸಭೆಯ ಹಾಜರಾತಿ ಪುಸ್ತಕ ಇಟ್ಟಿರಲಿಲ್ಲ. ಶಿಕ್ಷಕರಿಂದ ಪಡೆದ ಹಣದ ಬಗ್ಗೆ ಲೆಕ್ಕಪತ್ರ ಇಟ್ಟಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. ನಾನು ವಿಶ್ವನಾಥ ಇವರ ಮುಖಾಂತರ ಸಂಸ್ಥೆಗೆ ಹಣ ಕೊಟ್ಟಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಶಿವಮೂರ್ತಿಯವರು ಮರಣಹೊಂದುವ *2* ತಿಂಗಳ ಹಿಂದೆ ಕೊನೆಯ ಮೀಟಿಂಗ್ ಆಗಿತ್ತು. ಆ ಮೀಟಿಂಗ್ ನಲ್ಲಿ ಯಾವ ಊರಿನಲ್ಲಿ ಅಥವಾ ಯಾವ ಸ್ಥಳದಲ್ಲಿ ಸಂಸ್ಥೆಯ ಬಿಲ್ಡಿಂಗ್ ಕಟ್ಟಬೇಕು ಎನ್ನುವ ಬಗ್ಗೆ ಚರ್ಚೆ ಆಗಿರಲಿಲ್ಲ. ವಿಶ್ವನಾಥ ಮತ್ತು ಪರಶಿವ ಇವರಿಗೆ ನಿಮ್ಮ ರಿಟೈರ್ ಮೆಂಟ್ ಹಣವನ್ನು ಸಂಸ್ಥೆಗೆ ನೀಡಿ ಎಂದು ಕಿರುಕುಳ ನೀಡುತ್ತಿದ್ದರು ಎಂದು ಹೇಳಿಕೆ ಕೊಟ್ಟಿದ್ದೇನೆ. ವಿಶ್ವನಾಥ ಮತ್ತು ಪರಶಿವ ಇನ್ನೂ ನಿವೃತ್ತಿಯಾಗಿಲ್ಲ.

*12.* ಕೊಲೆ ಮಾಡಿದವರು ಯಾರು ಎಂದು ದೂರದರ್ಶನದಲ್ಲಿ ಸುದ್ದಿ ಪ್ರಕಟಗೊಂಡಾಗ ಆ ಕೊಲೆ ಮಾಡಿದ ವ್ಯಕ್ತಿಗಳು ಎಲ್ಲಿದ್ದಾರೆ ಎಂದು ನನಗೆ ಗೊತ್ತಾಗಿರಲಿಲ್ಲ. ವಿಶ್ವನಾಥ ಇವರು ಪರಶಿವಮೂರ್ತಿಯವರನ್ನು ಕುರಿತು ಇವರ ಕಿರುಕುಳ ಜಾಸ್ತಿಯಾಯಿತು ಇವರನ್ನು ಕೊಲೆ ಮಾಡದೇ ಇದ್ದರೇ ಸರಿ ಹೋಗುವುದಿಲ್ಲ ಎಂದು ಹೇಳುತ್ತಿದ್ದರು ಎಂದು

ನಾಗರಾಜು ಇವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಸ್ಥೆಯ ಸಭೆಗಳಲ್ಲಿ ಗಲಾಟೆ ನಡೆದ ಬಗ್ಗೆ ಪೋ.ದೂರು ದಾಖಲಾಗಿರಲಿಲ್ಲ.

***5* ನೇ ಆರೋಪಿ ಪರ ವಕೀಲರು ಗೈರು ಹಾಜರಿದ್ದು *5* ನೇ ಆರೋಪಿತ *1, 3* ಮತ್ತು *4* ನೇ ಆರೋಪಿತನ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.**

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು